ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ರಾಜ್ಯದಲ್ಲಿ 1175 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು 265 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 1440 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.

ಆ) 1141 ಬಾಲಕರ ಮತ್ತು 299 ಬಾಲಕಿಯರ ನಿಲಯಗಳು ಇರುತ್ತವೆ ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ವಿವರ	ಬಾಲಕರ	ಬಾಲಕಿಯರ	ಒಟ್ಟು
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	997	178	1175
2	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು	144	121	265
	ಒಟ್ಟು	1141	299	1440

ಇ) ಹೌದು.

ಈ) 2006–07ನೇ ಸಾಲಿನಲ್ಲಿ 50 ಹಿಂದುಳಿದ ವರ್ಗಗಳ ಹೊಸ ವಿದ್ಯಾರ್ಥಿನಿಲಯಗಳನ್ನು ಸಧ್ಯದಲ್ಲೇ ಮಂಜೂರು ಮಾಡಿ ಪ್ರಾರಂಭಿಸಲಾಗುವುದು.

584 (994) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) : ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲಾ ಪಂಚಾಯತಿಯಲ್ಲಿ 2004–05 ಹಾಗೂ 2005–06 ನೇ ಸಾಲಿನಲ್ಲಿ ಸರ್ಕಾರ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಕುಡಿಯುವ ನೀರಿಗಾಗಿ ಖರ್ಚು ಮಾಡಿರುವ ಹಣವೆಷ್ಟು: (ತಾಲ್ಲೂಕುವಾರು ವಿವರ ನೀಡುವುದು):

ಆ) 2004–05 ಹಾಗೂ 2005–06 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಂಜೂರಾದ ಬೋರವೆಲ್‌ಗಳೆಷ್ಟು: (ತಾಲ್ಲೂಕುವಾರು ವಿವರ ನೀಡುವುದು):

ಇ) ಕುಂದಗೋಳ ತಾಲ್ಲೂಕಿನಲ್ಲಿ ಎರಡು ವರ್ಷಗಳ ಹಿಂದೆ ತೆಗೆಸಿದ ಬೋರವೆಲ್‌ಗಳೆಷ್ಟು: ವಿವಿಧ ಯೋಜನೆಗಳಿಗಾಗಿ ಖರ್ಚು ಮಾಡಲಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) :

ಅ) ಧಾರವಾಡ ಜಿಲ್ಲಾ ಪಂಚಾಯತಿಯಲ್ಲಿ 2004–05 ಹಾಗೂ 2005–06ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಾಗೂ ಜಿಲ್ಲಾ ಪಂಚಾಯತಿಯಲ್ಲಿ ಕುಡಿಯುವ ನೀರಿಗಾಗಿ ಖರ್ಚು ಮಾಡಿರುವ ಹಣದ ತಾಲ್ಲೂಕುವಾರು ವಿವರ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ತಾಲ್ಲೂಕು	2004-05	2005-06
1	ಧಾರವಾಡ	158.59	204.34
2	ಹುಬ್ಬಳ್ಳಿ	69.30	106.90
3	ಕಲಘಟಗಿ	104.23	143.50
4	ಕುಂದಗೋಳ	92.51	119.48
5	ನವಲಗುಂದ	58.41	85.48
	ಒಟ್ಟು	483.04	660.15

ಆ) 2004-05 ಹಾಗೂ 2005-06ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಂಜೂರಾದ ಬೋರವೆಲ್‌ಗಳ ತಾಲ್ಲೂಕುವಾರು ವಿವರ.

ಕ್ರ.ಸಂ.	ತಾಲ್ಲೂಕು	2004-05	2005-06
1	ಧಾರವಾಡ	10	78
2	ಹುಬ್ಬಳ್ಳಿ	8	48
3	ಕಲಘಟಗಿ	9	44
4	ಕುಂದಗೋಳ	9	52
5	ನವಲಗುಂದ	7	42
	ಒಟ್ಟು	43	264

ತಾಲ್ಲೂಕು	ವರ್ಷ	ಕೊರೆಸಿರುವ ಬೋರ್‌ವೆಲ್‌ಗಳು	ವಿವಿಧ ಕುಡಿಯುವ ನೀರಿನ ಯೋಜನೆಗಳ ವೆಚ್ಚ (ರೂ. ಲಕ್ಷಗಳಲ್ಲಿ)
ಕುಂದಗೋಳ್	2004-05	9	92.51
	2004.05	52	119.93

585 (995) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ(ಕುಂದಗೋಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಜಲ ಕಾರ್ಯಕ್ರಮ ದಡಿಯಲ್ಲಿ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾದ ಕಾರ್ಯಕ್ರಮಗಳೆಷ್ಟು; ತಾಲ್ಲೂಕುವಾರು ಬಿಡುಗಡೆಯಾದ ಹಣವೆಷ್ಟು (ವಿವರ ನೀಡುವುದು);

ಆ) ಸುಜಲ ಜಲಾನಯನ ಅಭಿವೃದ್ಧಿಯಲ್ಲಿ ಅವ್ಯವಹಾರ ಆಗಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;